ದಿನಾಂಕಃ 13-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವೈ ಎಂ ಆರ್ ವಕೀಲರಿಂದಃ</u>**

ಸಿದ್ದಪ್ಪನವರ ಮಗ ದಾಸಪ್ಪ ಎಂದರೆ ನನ್ನ ತಂದೆ. ನನ್ನ ತಂದೆ ನಿಪಿ-1 ರಂತೆ ಖರೀದಿ ಮಾಡಿದ ಆಸ್ತಿಯಲ್ಲಿ ನಾವು ಈಗ ಮನೆ ಕಟ್ಟಿಕೊಂಡು ವಾಸವಾಗಿದ್ದೆವೆ ಎಂದರೆ ಸರಿ. ನಿಪಿ-1 ರಲ್ಲಿನ ಆಸ್ತಿಯನ್ನು ಹೊರತುಪಡಿಸಿ ಸದರಿ ಆಸ್ತಿಯ ಚೆಕ್ಕುಬಂದಿಯ ಸುತ್ತ ಮುತ್ತ ಬೇರೆ ಆಸ್ತಿಯನ್ನು ಖರೀದಿಸಿದ ಬಗ್ಗೆ ದಾಖಲೆ ಇದೆ. ಸಾಕ್ಷಿಗೆ ಈಗ ತಮ್ಮ ಪರವಾಗಿ ಹಾಜರುಪಡಿಸಿದ ದಾಖಲೆಗಳ ಪಟ್ಟಿಯನ್ನು ತೋರಿಸಲಾಗಿ ಸದರಿ ದಾಖಲೆಗಳನ್ನು ಪರಿಶೀಲಿಸಿ ತಾನು ಹೇಳಿದಂತಹ ಯಾವುದೇ ದಾಖಲೆ ಇಲ್ಲದಿರುವುದನ್ನು ನೋಡಿ ಖಚಿತಪಡಿಸಿಕೊಂಡಿರುತ್ತಾರೆ. ದಾವಾಸ್ತಿಯ ಮನೆಯಲ್ಲಿ ಪೂರ್ವ ದಿಕ್ಕಿಗೆ ಉತ್ತರ-ದಕ್ಷಿಣವಾಗಿ ಸಂಪೂರ್ಣವಾಗಿ ಗೋಡೆ ಇದೆ ಎಂದರೆ ಸರಿ. ಸದರಿ ಗೋಡೆಯಲ್ಲಿ ಯಾವುದೇ ವತಾಯನವಾಗಲಿ(ಕಿಟಕಿ) ಅಥವಾ ಬಾಗಿಲಾಗಲಿ ಇಲ್ಲ. ಸದರಿ ಗೋಡೆಗೆ ಹೊಂದಿಕೊಂಡಂತೆ ಪೂರ್ವ ದಿಕ್ಕಿಗೆ ಇರುವ ಆಸ್ತಿಯೇ ಈ ದಾವೆಯ ಪ್ರತಿವಾದಿಗಳ ಆಸ್ತಿ ಎಂದರೆ ಸರಿ. ನಮ್ಮ ಮನೆಯ ಮುಖ್ಯಬಾಗಿಲು ಪಶ್ಚಿಮ ದಿಕ್ಕಿಗೆ ಇದೆ ಎಂದರೆ ಸರಿ. ನಾನು ಸದರಿ ಬಾಗಿಲ ಮುಖಾಂತರ ರಸ್ತೆಯ ಮೂಲಕ ಮನೆಗೆ ಪ್ರವೇಶ ಮಾಡುತ್ತೇವೆ ಎಂದರೆ ಸರಿ. ಅದರಂತೆ ನಮ್ಮ ಮನೆಗೆ ಉತ್ತರ ದಿಕ್ಕಿಗೂ ಸಹ ಪೂರ್ವ- ಪಶ್ಚಿಮವಾಗಿ ಗೋಡೆ ಇದೆ ಎಂದರೆ ಸರಿ. ಸದರಿ ಗೋಡೆಗೆ ಹೊಂದಿಕೊಂಡಂತೆ ಈ ದಾವೆಯ ಪ್ರತಿವಾದಿಗಳ ಅಸ್ತಿ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಗೋಡೆಯಿಂದ 3 ವರೆ ಅಡಿ ಖಾಲಿ ಜಾಗ ಇದ್ದು ತದನಂತರ ಪ್ರತಿವಾದಿಗಳ ಆಸ್ತಿ ಬರುತ್ತದೆ ಎಂದು ನುಡಿಯುತ್ತಾರೆ. ಸದರಿ 3ವರೆ ಅಡಿ ಖಾಲಿ ಜಾಗ ಇರುವ ಕುರಿತು ಯಾವುದಾದರೂ ದಾಖಲೆ ಇದೆಯೇ ಎಂದರೆ ಸಾಕ್ಷಿ ನಿಪಿ-1 ಇದೆ ಎಂದು ನುಡಿಯುತ್ತಾರೆ.

ನಮ್ಮ ಮನೆ 22 ವರೆ ಇಂಟು 25 ಅಡಿ ವಿಸ್ತೀರ್ಣದಲ್ಲಿ ಸಂಪೂರ್ಣ ಮನೆ ಇರುವ ಕುರಿತು ನ್ಯಾಯಾಲಯದಿಂದ ಆಯುಕ್ತರನ್ನು ನೇಮಿಸಿ ಅಳತೆ ಮಾಡಲು ನನ್ನದೇನು ತಕರಾರು ಇಲ್ಲ. ಸಾಕ್ಷಿಗೆ ಈಗ ಒಂದು ಭಾವಚಿತ್ರದ ಕಲರ್ ಪ್ರತಿಯನ್ನು ತೋರಿಸಲಾಗಿ ಸದರಿ ಭಾವಚಿತ್ರದಲ್ಲಿ ಕಾಣಿಸುತ್ತಿರುವ ಗೋಡೆ ನಮ್ಮ ಮನೆಯ ಉತ್ತರ ದಿಕ್ಕಿನ ಗೋಡೆ ಎಂದು ನುಡಿಯುತ್ತಾರೆ. ಸದರಿ ಪೊಟೋವನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು **ನಿಡಿ-2** ಎಂದು (ತಕರಾರಿಗೆ ಒಳಪಟ್ಟು) ಗುರುತಿಸಲಾಯಿತು. ಈ ದಾವೆಗೆ ಪ್ರತಿವಾದಿಗಳು ಸಲ್ಲಿಸಿರುವ ತಕರಾರಿನ ಬಗ್ಗೆ

ಅಥವಾ ಹಾಜರುಪಡಿಸಿದ ದಾಖಲೆಗಳ ಬಗ್ಗೆಯಾಗಲಿ ನಾನು ತಿಳಿದುಕೊಂಡಿರುವುದಿಲ್ಲ. ಅದರಂತೆ ಪ್ರತಿವಾದಿಗಳು ಆಸ್ತಿ ನಂ 149ರ ಮಾಲೀಕರು ಮತ್ತು ಅದರ ಅಳತೆ ಪೂರ್ವ-ಪಶ್ಚಿಮ 25ವರೆ ಅಡಿ, ಉತ್ತರ–ದಕ್ಷಿಣ 27 ಅಡಿ ಅಳತೆಯ ಮಾಲೀಕರು ಎಂದರೆ ನನಗೆ ಗೊತ್ತಿಲ್ಲ. ಸದರಿಯವರ ಆಸ್ತಿಯನ್ನು ನಾನು ನೋಡಿರುತ್ತೇನೆ. ಸದರಿ ಆಸ್ತಿಯ ಪೂರ್ವಕ್ಕೆ ನಾಗಪ್ಪನವರ ಆಸ್ತಿ. ಪಶ್ಚಿಮಕ್ಕೆ ಮತ್ತು ಉತ್ತರಕ್ಕೆ ಗ್ರಾಮಪಂಚಾಯತಿ ರಸ್ತೆ ಎಂದರೆ ಸರಿ, ದಕ್ಷಿಣಕ್ಕೆ ನಮ್ಮ ಮನೆ ಇದೆ ಎಂದರೆ ಸಾಕ್ಷಿ ದಕ್ಷಿಣಕ್ಕೆ ನಮ್ಮ ಮನೆ ಮತ್ತು ಖಾಲಿ ಜಾಗ ಇದೆ ಎಂದು ನುಡಿಯುತ್ತಾರೆ. ಸದರಿ ಮನೆಯನ್ನು ನನ್ನ ತಂದೆ ಜೀವಂತವಿದ್ದಾಗಲೇ ಕಟ್ಟಿಸಿರುತ್ತಾರೆ. ಸದರಿ ಮನೆ 1978 ರಲ್ಲಿ ಕಟ್ಟಿರುತ್ತಾರೆ. ಸರಿದ ಮನೆಯನ್ನು ಕಟ್ಟುವ ಕಾಲಕ್ಕೆ ಪಂಚಾಯತಿಯಿಂದ ಯಾವುದೇ ಪರವಾನಿಗೆಯನ್ನು ಪಡೆದಿಲ್ಲ ಮತ್ತು ತದನಂತರವೂ ಯಾವುದೇ ಅಳತೆ ಕಾರ್ಯ ಮಾಡಿದ ಬಗ್ಗೆ ನನಗೆ ಮಾಹಿತಿ ಇಲ್ಲ.

ನಾನು 22ವರೆ ಅಡಿ ಇಂಟು 25ವರೆ ಅಡಿ ಮನೆಗೆ ಮಾತ್ರ ಕಂದಾಯವನ್ನು ಕಟ್ಟುತ್ತಿದ್ದೇನೆ ಎಂದರೆ ಸರಿ. ಪ್ರಸ್ತುತ ಪ್ರತಿವಾದಿಗಳು ಅವರಿಗೆ ಸೇರಿದ ಜಾಗದಲ್ಲಿ ಮನೆಕಟ್ಟಲು ತಳಪಾಯ ಹಾಕಿದ್ದಾರೆ ಎಂದರೆ ಸಾಕ್ಷಿ ನಮ್ಮ ಜಾಗವನ್ನು ಸೇರಿಸಿ ಒತ್ತುವರಿ ಮಾಡಿ ತಳಪಾಯ ಹಾಕಿದ್ದಾರೆ ಎಂದು ನುಡಿಯುತ್ತಾರೆ. ಸದರಿ ತಳಪಾಯ ಭೂಮಿಯ ಮೇಲ್ಮಟ್ಟದಿಂದ 2 ಅಡಿ ಮೇಲೆ ಇದೆ. ಸದರಿಯವರು ತಳಪಾಯವನ್ನು ಹಾಕಿದ ನಂತರ ನಾನು ತಕರಾರು ತೆಗೆದು ಈ ದಾವೆಯನ್ನು ಹೂಡಿದ್ದೆನೆ ಎಂದರೆ ಸರಿ. ಈ ದಾವೆಗೆ ಯಾವುದೇ ಮಧ್ಯಂತರ ಆದೇಶವಾಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಒಂದು ಭಾವಚಿತ್ರದ ತೋರಿಸಲಾಗಿ ಸದರಿ ಭಾವಚಿತ್ರದಲ್ಲಿ ಕಾಣಿಸುತ್ತಿರುವ ತಳಪಾಯ ಪ್ರತಿವಾದಿಗಳಿಗೆ ಸೇರಿದ ಜಾಗ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ 3 ವರೆ ಜಾಗ ಸೇರಿ ತಳಪಾಯ ಹಾಕಿದ್ದಾರೆ ಎಂದು ನುಡಿಯುತ್ತಾರೆ. ಸದರಿ ತಳಪಾಯದ 4 ದಿಕ್ಕಿಗೂ ಖಾಲಿ ಜಾಗ ಇದೆ ಎಂದರೆ ಸರಿ. ಸದರಿ ಫೊಟೋವನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು **ನಿಡಿ-3** ಎಂದು ಗುರುತಿಸಲಾಯಿತು. ಈ ದಾವೆ ಹೂಡುವ ಸಮಯದಲ್ಲಿ ನಿಡಿ-3ರಲ್ಲಿನ ತಳಪಾಯ ಇತ್ತು ಎಂದರೆ ಸರಿ. ಸದರಿ ತಳಪಾಯ ಎಷ್ಟು ಅಳತೆಯಿಂದ ಕೂಡಿದೆ ಎಂದು ನಾನು ಯಾವುದೇ ಮಾಹಿತಿಯನ್ನು ನಮ್ಮ ವಕೀಲರಿಗೆ ಕೊಟ್ಟಿಲ್ಲ ಮತ್ತು ದಾವೆಯಲ್ಲಿಯಾ ಸಹ ನಮೂದಿಸಿಲ್ಲ ಹಾಗಾಗಿ ಪ್ರತಿವಾದಿಗಳ ಆಸ್ತಿಯ ವಿಸ್ತೀರ್ಣ ನನಗೆ ಗೊತ್ತಿಲ್ಲ.

ಆಸ್ತಿ ಸಂಖ್ಯೆ 149ರ ಅಳತೆ ನಿಡಿ-3ರಲ್ಲಿ ಹಾಕಿರುವ ತಳಪಾಯ ಮತ್ತು ಅದರ ಸುತ್ತಲೂ ಬಿಟ್ಟಿರುವ ಖಾಲಿ ಜಾಗವನ್ನು ಸೇರಿಸಿ ಪ್ರತಿವಾದಿಗಳು ಖರೀದಿಸಿದ 25ವರೆ ಇಂಟು 27 ಅಡಿಗಿಂತ ಹೆಚ್ಚಿಗೆ ಜಾಗ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಮೇಲೆ ಹೇಳಿದ ಪ್ರತಿವಾದಿಗಳ ಚೆಕ್ಕುಬಂದಿ ಆಸ್ತಿಯೊಳಗೆ ನಿಡಿ-3 ರ ಆಸ್ತಿ ಬರುತ್ತದೆ ಎಂದರೆ ಸರಿ. ಸದರಿ ನಿಡಿ-3ರಲ್ಲಿ ಕಾಣಿಸುತ್ತಿರುವ ಪೂರ್ವ-ಪಶ್ಚಿಮ ದಿಕ್ಕಿನಲ್ಲಿ ನಮಗೆ ಸೇರಿದ ಯಾವುದೇ ಆಸ್ತಿ ಇಲ್ಲ ಎಂದರೆ ಸರಿ. ಈ ದಾವೆಯ ಹೂಡುವ ಪೂರ್ವ ಪ್ರತಿವಾದಿಗಳು ಎಷ್ಟು ವರ್ಷಗಳ ಹಿಂದೆ ತಳಪಾಯ ಹಾಕಿದ್ದರು ಎಂದರೆ ಸಾಕ್ಷಿ 2017ರಲ್ಲಿ ತಳಪಾಯ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ನಾನು ಪ್ರತಿವಾದಿಗಳು ನಮ್ಮ ಮನೆಯಿಂದ ಉತ್ತರಕ್ಕೆ 3 ವರೆ ಅಡಿ ಜಾಗವನ್ನು ಒತ್ತುವಾರಿ ಮಾಡಿರುವುದಾಗಿ ದಾಖಲಿಸಿದ್ದು ಸದರಿ 3 ವರೆ ಅಡಿ ಜಾಗದ ತೆರವುಗೊಳಿಸಲು ಸಹ ನಾನು ಕೋರಿರುತ್ತೇನೆ. ನನ್ನ ಆಸ್ತಿಗೆ ಹೊಂದಿಕೊಡಂತೆ ಖಾನೆ ಸುಮಾರಿ ನಂ 132/ಬಿ ಆಸ್ತಿ ಈಗ ಆಸ್ತಿ ಸಂಖ್ಯೆ 150 ಅಗಿದ್ದು ಸದರಿ ಆಸ್ತಿಯ ಯಾವುದೇ ದಿಕ್ಕಿಗೂ ನಮಗೆ ಸೇರಿದ ಆಸ್ತಿ ಬರುವುದಿಲ್ಲ ಎಂದರೆ ಸರಿಯಲ್ಲ.

ನಾನು ಗ್ರಾಮದಲ್ಲಿ ಬಲಾಢ್ಯನಾಗಿದ್ದು, ಪ್ರ,ತಿವಾದಿಗಳು ಅಹಾಯಕರಾಗಿದ್ದು , ಅವರ ಮೇಲೆ ದೌರ್ಜನ್ಯ ಮಡಿ ಸದರಿಯವರು ಅವರ ಆಸ್ತಿಯಲ್ಲಿ ಮನೆಕಟ್ಟುವುದನ್ನು ತಡೆದು ಅವರ ವಿರುದ್ದ ಕ್ರಿಮಿನಲ್ ಪ್ರಕರಣದ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಕ್ರಿಮಿನಲ್ ಪ್ರಕರಣವನ್ನು ಪ್ರತಿವಾದಿಗಳ ವಿರುದ್ದ ಹೂಡಿರುತ್ತೇನೆ ಎಂದು ನುಡಿಯತ್ತಾರೆ, ಹಾಗಾಗಿ ದಾವಾಸ್ತಿ ದಿಕ್ಕಿನಲ್ಲೂ ನಮಗೆ ಸೇರಿದ ಜಾಗ ಉಳಿದಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯ ಚೆಕ್ಕುಬಂದಿಯೊಳಗೆ ನಾನು ಪ್ರತಿವಾದಿಗಳಿಗೆ ಸೇರಿದ ಆಸ್ತಿ ಸೇರಿಸಿ ಈ ದಾವೆ ಹೂಡಿದ್ದೆನೆ ಎಂದರೆ ಸರಿ. ಸದರಿ ಎಲ್ಲಾ ಸಂಗತಿಗಳು ನನಗೆ ಗೊತ್ತಿದ್ದರು ಸಹ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)** **ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.